# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 322
ಸದಸ್ಯರ ಹೆಸರು : ಡಾ||ಚಂದ್ರಶೇಖರ ಬಸವರಾಜ ಪಾಟೀಲ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 11.12.2024

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಲಿಂಗಸೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ (NAC) ಮತ್ತು ಹಟ್ಟಿ ಪಟ್ಟಣದಿಂದ ಸಾವಿರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಬೇರೆ ಬೇರೆ ತಾಲ್ಲೂಕಿಗೆ ಹೋಗಿ ಬರುತ್ತಿದ್ದು, ವಿದ್ಯಾರ್ಥಿಗಳಿಗೆ ಪೋಷಕರಿಗೆ ಹಾಗೂ ಸಾರ್ವಜನಿಕರಿಗೆ ದೂರದ ಊರಿಗೆ ಹೋಗಿ ಬರಲು ಸರಿಯಾದ ಬಸ್ ಸಂಚಾರ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದ್ದೆಯೇ;</td><td>ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಪಟ್ಟಣದ ಬಸ್ ನಿಲ್ದಾಣದಿಂದ ವಿವಿಧ ತಾಲ್ಲೂಕು/ಸ್ಥಳಗಳಿಗೆ ಒಟ್ಟು 143 ಆಗಮನ/ನಿರ್ಗಮನಗಳು ಕಾರ್ಯಾಚರಣೆಯಲ್ಲಿರುತ್ತವೆ.<br><br>ಹಟ್ಟಿ ಪಟ್ಟಣದ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳ ವ್ಯಾಸಾಂಗದ ಅನುಕೂಲಕ್ಕಾಗಿ ಲಿಂಗಸುಗೂರು ಘಟಕದಿಂದ ಹುಬ್ಬಳ್ಳಿ, ಧಾರವಾಡ ಹಾಗೂ ಬೆಂಗಳೂರಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ.<br><table><tr><th>ಮಾರ್ಗ</th><th>ಸಾರಿಗೆ ಮಾರ್ಗ</th><th>ಹಟ್ಟಿ ನಿರ್ಗಮನ ಸಮಯ</th></tr><tr><td>ಹಟ್ಟಿ-ಧಾರವಾಡ</td><td>ವೇಗದೂತ</td><td>06:15</td></tr><tr><td>ಹಟ್ಟಿ-ಹುಬ್ಬಳ್ಳಿ</td><td>ವೇಗದೂತ</td><td>07:15</td></tr><tr><td>ಹಟ್ಟಿ-ಬೆಂಗಳೂರು</td><td>ನಾನ್ ಎಸಿ ಸ್ಲೀಪರ್</td><td>20.15</td></tr></table><hr>ಹಟ್ಟಿಯಿಂದ ಲಿಂಗಸುಗೂರು 22 ಕಿ.ಮೀ ಅಂತರದಲ್ಲಿದ್ದು, ಹಟ್ಟಿಯಿಂದ ಲಿಂಗಸುಗೂರಿಗೆ ಪ್ರತಿ ದಿನ 64 ಸುತ್ತುವಳಿಗಳು ಕಾರ್ಯಾಚರಣೆ ಯಲ್ಲಿರುತ್ತವೆ. ಪ್ರಸ್ತುತ ಲಿಂಗಸುಗೂರು ಬಸ್ ನಿಲ್ದಾಣದಿಂದ ವಿವಿಧ ತಾಲ್ಲೂಕು/ಜಿಲ್ಲೆ/ಸ್ಥಳಗಳಿಗೆ ಒಟ್ಟು 799 ಆಗಮನ/ನಿರ್ಗಮನಗಳು ಕಾರ್ಯಾಚರಣೆಯಲ್ಲಿರುತ್ತವೆ.<br>ಪ್ರಸ್ತುತ ಸಾರ್ವಜನಿಕರ ಬೇಡಿಕೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಇದು ಈ ಭಾಗದ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳ ಅವಶ್ಯಕತೆಗೆ ಅನುಗುಣವಾಗಿರುತ್ತದೆ.</td></tr>
<tr><td>ಆ)</td><td>ಬಂದಿದ್ದಲ್ಲಿ ಹಟ್ಟಿ ಪಟ್ಟಣಕ್ಕೆ ಬಸ್ ಡೀಪೋ ಮತ್ತು ಕಟ್ಟಡ ಮಂಜೂರು ಮಾಡಲು ಸರ್ಕಾರ ಕ್ರಮವಹಿಸುವುದೆ?</td><td>ಕ.ರಾ.ರ.ಸಾ.ನಿಗಮದ ಪ್ರಚಲಿತ ನಿಯಮಗಳನ್ವಯ ಬಸ್ ಘಟಕಗಳನ್ನು ತಾಲ್ಲೂಕು ಕೇಂದ್ರದಲ್ಲಿ ಮಾತ್ರ ನಿರ್ಮಿಸಲು ಅವಕಾಶ ಇರುತ್ತದೆ. ಹಟ್ಟಿ ಪಟ್ಟಣ ಹೋಬಳಿಯಾಗಿರುವುದರಿಂದ ಬಸ್ ಘಟಕ ನಿರ್ಮಾಣ ಮಾಡಲು ಅವಕಾಶ ಇರುವುದಿಲ್ಲ.</td></tr>
</table>

ಸಂಖ್ಯೆ: ಟಿಡಿ 208 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು